**ಆರ್ ಎ ನಂ: 52-20**
**ಪಿ ಡಬ್ಲ್ಯೂ : 1**

**ದಿ: 10-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲು: ಶ್ರೀ ಎಸ್ ಸಿ ಆರ್ ವಕೀಲರಿಂದ**

6. ನಾನು ಪ್ರತಿವಾದಿಗಳ ವಿರುದ್ದ ವಿಭಾಗಕ್ಕಾಗಿ ದಾವೆ ಹೂಡಿದ್ದೇನೆ. ನನ್ನ ವಯಸ್ಸು 70 ವರ್ಷ ಆಗಿರುತ್ತದೆ. ನಾನು ದಾವೆ ಹೂಡಿದಾಗಿನಿಂದ ನಾನು ನೆಂಟರ ಮನೆಗೆ ಹಬ್ಬಗಳಿಗೆ, ಸಮಾರಂಭಗಳಿಗೆ ಹೋಗುತ್ತಿರುತ್ತೇನೆ ಎಂದರೆ ನಿಜ. ನಾನು ದಾವೆ ಹೂಡಿದಾಗಿನಿಂದ ಇಲ್ಲಿಯವರೆಗೆ ಆರೋಗ್ಯವಾಗಿರುತ್ತೇನೆ ಎಂದರೆ ನಿಜ. ನಾನು ಹೂಡಿದ ದಾವೆಯಲ್ಲಿ ಸಾಕ್ಷಿ ಹೇಳಲು ನನಗೆ ತೊಂದರೆ ಇರಲಿಲ್ಲ ಎಂದರೆ ನಿಜ. ರುದ್ರಮ್ಮರವರು ನನಗೆ ತಂಗಿಯಾಗಬೇಕು ಅವರಿಗೂ ಸಹ ದಾವೆಯಲ್ಲಿ ಸಾಕ್ಷಿ ಹೇಳಲು ತೊಂದರೆ ಇರಲಿಲ್ಲ ಎಂದರೆ ನಿಜ. ನಾವು ಹೂಡಿದ್ದ ಓ ಎಸ್ ನಂ 269/2007 ದಿನಾಂಕ: 21-02-2017 ರಂದು ತೀರ್ಮಾನವಾಗಿರುತ್ತದೆ ಎಂದರೆ ನಿಜ. ಸದರಿ ದಾವೆಯಲ್ಲಿ ತೀರ್ಪು ನೀಡಿದ ದಿನವೇ ನಮಗೆ ತೀರ್ಪಿನ ವಿಷಯ ಗೊತ್ತಾಗಿತ್ತು ಎಂದರೆ ನಿಜ. ತೀರ್ಪು ಬಂದ ಮರುದಿನವೇ ತೀರ್ಪಿನ ದೃಢೀಕೃತ ನಕಲನ್ನು ಪಡೆಯಲು ನಾವು ಅರ್ಜಿ ಸಲ್ಲಿಸಿದ್ದೆವು ಎಂದರೆ ನಿಜ. ತೀರ್ಪು ಆದ ತಕ್ಷಣ ನಮಗೆ ತೀರ್ಪಿನ ದೃಢೀಕೃತ ನಕಲನ್ನು ಕೊಟ್ಟಿರುತ್ತಾರೆ ಎಂದರೆ ನಿಜ. ತೀರ್ಪು ಆದ ತಕ್ಷಣ ನಮಗೆ ಮೇಲ್ಮನವಿ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ನಿಜ. ತೀರ್ಪು ನೀಡಿದ ನ್ಯಾಯಾಲಯದಲ್ಲಿಯೇ ತೀರ್ಪಿನ ಮರುಪರಿಶೀಲನೆಗಾಗಿ ನಾವು ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದೆವು ಎಂದರೆ ನಿಜ. ನಾವು ಸಲ್ಲಿಸಿದ ಮರುಪರಿಶೀಲನಾ ಅರ್ಜಿ 2000 ಸಾವಿರ ಖರ್ಚು ಸಹಿತ ವಜಾ ಆಗಿರುತ್ತದೆ ಎಂದರೆ ನಿಜ. ನ್ಯಾಯಾಲಯ ವಿಧಿಸಿದ ಖರ್ಚನ್ನು ನಾನು ಇದುವರೆಗೂ ಕೊಟ್ಟಿರುವುದಿಲ್ಲ ಎಂದರೆ ನಿಜ. ನಾನು ನ್ಯಾಯಾಲಯ ವಿಧಿಸಿದ ಖರ್ಚನ್ನು ಕೊಡದೇ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುತ್ತೇನೆ ಎಂದರೆ ನಿಜ. ನಾವು ಮೇಲ್ಮನವಿಯನ್ನು ದಿನಾಂಕ: 17-11-2020 ರಂದು ಸಲ್ಲಿಸಿರುತ್ತೇವೆ ಎಂದರೆ ನಿಜ. ದಾವೆಯಲ್ಲಿ ತೀರ್ಪು ಆದಾಗಿನಿಂದ ಈ ಮೇಲ್ಮನವಿಯನ್ನು 3 ವರ್ಷ 8 ತಿಂಗಳು 26 ದಿನ ಆದ ನಂತರ ಸಲ್ಲಿಸಿರುತ್ತೇವೆ ಎಂದರೆ ನಿಜ. ಮೇಲ್ಮನವಿಯನ್ನು ತಡವಾಗಿ ಸಲ್ಲಿಸುವುದಕ್ಕೂ ಮತ್ತು ನಾವು ಮಾನ್ಯ ಕೆಳ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ನಿಜ. ನನ್ನ ಅರ್ಜಿಯಲ್ಲಿ ಈ ಮೇಲ್ಮನವಿಯನ್ನು ಸಲ್ಲಿಸಲು ಇಷ್ಟು ವರ್ಷ ತಡವಾಗಿರುತ್ತದೆಂದು ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಅರ್ಜಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನನ್ನ ಅರ್ಜಿಯಲ್ಲಿ ಏನು ಬರೆಯಲಾಗಿದೆ ಗೊತ್ತಿದೆ. ನನ್ನ ಅರ್ಜಿಯಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ ಕಾರಣ ನನಗೆ ಓದಲು ಬರೆಯಲು ಬರುವುದಿಲ್ಲ.

7. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಕನ್ನಡದಲ್ಲಿ ಬರೆಯಲಾಗಿದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ವಿಷಯವನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಯಾರ ಕಡೆಯಿಂದ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಸಿರುತ್ತೇನೆ ನೆನಪಿಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಯಾರ ಮುಂದೆ ಪ್ರಮಾಣೀಕರಿಸಿರುತ್ತೇನೆ ನೆನಪಿಲ್ಲ. ನಾನು ನನ್ನ ಅರ್ಜಿಯಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇಷ್ಟು ವರ್ಷ ಮೇಲ್ಮನವಿ ಸಲ್ಲಿಸಲು ತಡವಾಗಿರುತ್ತದೆ ಎಂಬುದಾಗಿ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ ವಿಷಯ ಸುಳ್ಳು ಎಂದರೆ ಸರಿಯಲ್ಲ. ನಾನು ಮೇಲ್ಮನವಿಯನ್ನು 3 ವರ್ಷ 8 ತಿಂಗಳು 26 ದಿನ ತಡವಾಗಿ ಸಲ್ಲಿಸಿದಕ್ಕೆ ಸಕಾರಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಮೇಲ್ಮನವಿಯನ್ನು 3 ವರ್ಷ 8 ತಿಂಗಳು 26 ದಿನ ತಡವಾಗಿ ಸಲ್ಲಿಸಿರುತ್ತೇವೆಂದು ನನ್ನ ತಂಗಿ ರುದ್ರಮ್ಮರವರಿಗೂ ಗೊತ್ತಿತ್ತು ಎಂದರೆ ನಿಜ. ಈ ದಿನ ನನ್ನ ಮಕ್ಕಳು ಹಾಗೂ ರುದ್ರಮ್ಮರವರ ಮಕ್ಕಳು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ನಿಜ. ನಾನು ನನ್ನ ಪರವಾಗಿ ಮಾತ್ರ ಸಾಕ್ಷಿ ಹೇಳುತ್ತೇನೆ. ನಾವು 3 ವರ್ಷ 8 ತಿಂಗಳು 26 ದಿನ ತಡವಾಗಿ ಸಲ್ಲಿಸಿರುವ ಬಗ್ಗೆ ಕಾಲವಿಳಂಬವನ್ನು ಮನ್ನಾ ಮಾಡಲು ಅರ್ಹರಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ನಾವು ಕಾಲವಿಳಂಬವನ್ನು ಮನ್ನಾ ಮಾಡಲು ಅರ್ಹರಲ್ಲ ಆದ ಕಾರಣ ಈ ಮೇಲ್ಮನವಿ ಸಹ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಈ ಮೇಲ್ಮನವಿಯನ್ನು ಸಲ್ಲಿಸಲು ಆದ ಕಾಲವಿಳಂಬದ ಬಗ್ಗೆ ಪ್ರತಿದಿನದ ಕಾಲವಿಳಂಬ ಆಗಲು ಕಾರಣವನ್ನು ನನ್ನ ಅರ್ಜಿಯಲ್ಲಿ ಹಾಗೂ ಮುಖ್ಯ ವಿಚಾರಣೆ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಪುನರ್ ಪರಿಶೀಲನೆ ಅರ್ಜಿಯ ಆದೇಶ ತಪ್ಪು ಇರುತ್ತದೆಂದು ನಾವು ಮೇಲ್ಮನವಿ ಸಲ್ಲಿಸಿರುತ್ತೇವೆ. ಆ ಅರ್ಜಿಯ ಆದೇಶವನ್ನು ನಾವು ರಾಮನಗರ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇವೆ. ಆ ಮೇಲ್ಮನವಿಯ ನಂಬರ್ ನನಗೆ ಗೊತ್ತಾಗುವುದಿಲ್ಲ. ನನಗೆ ಪ್ರಾಪಂಚಿಕ ಜ್ಞಾನ ಇರುತ್ತದೆ ಎಂದರೆ ನಿಜ. ಕಾಲವಿಳಂಬ ಮನ್ನಾ ಮಾಡಲು ಸಲ್ಲಿಸಿದ ಅರ್ಜಿ ಊರ್ಜಿತವಾಗುವುದಿಲ್ಲ ಅದು ವಜಾಕರಿಸುವಂತಹದ್ದು ಎಂದರೆ ನಿಜ.

ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**